# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1298 |
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರು( ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.03.2026. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2023-24ನೇ ಸಾಲಿನ ನಂತರ ಇಲ್ಲಿಯವರೆಗೆ ಗ್ರಾಮ ಪಂಚಾಯಿತಿಗಳಿಗೆ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗಾಗಿ ಗ್ರಾಮ ಪಂಚಾಯಿತಿಗಳಿಗೆ ನೇರವಾಗಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಅನುದಾನದ ಒಟ್ಟು ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | 2023-24 ಮತ್ತು 2024-25ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದ 15ನೇ ಕೇಂದ್ರ ಹಣಕಾಸು ಆಯೋಗದ ಅನುದಾನದ ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.<br><br>15 ನೇ ಕೇಂದ್ರ ಹಣಕಾಸು ಆಯೋಗದ ಅನಿರ್ಬಂಧಿತ ಅನುದಾನದಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿರುತ್ತದೆ. |
| (ಆ) | ಸಾರ್ವಜನಿಕ ಗ್ರಾಮ ಪಂಚಾಯತ್ ರಸ್ತೆ ಎಂಬುದಾಗಿ ದೃಢೀಕರಣ ಪತ್ರ ವಿತರಿಸಸಿವಂತೆ ಕೋರಿ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿದಾಗ ಯಾವ ದಾಖಲೆಗಳು ಮತ್ತು ನಿಯಮದ ಆಧಾರದ ಮೇಲೆ ಸದರಿ ದೃಢೀಕರಣ ಪತ್ರವನ್ನು ನೀಡಲು ಅವಕಾಶವಿದೆ: | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2026 ರ ನಿಯಮ 69 ರನ್ವಯ ನಿರ್ವಹಿಸಲಾಗುವ ದಾಖಲೆಗಳನ್ವಯ ದೃಢೀಕರಣ ಪತ್ರವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. |
| (ಇ) | ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಪಂಚಾಯತ್ ರಸ್ತೆ ಎಂಬುದನ್ನು ದೃಢೀಕರಿಸುವ ದಾಖಲೆಗಳು ಯಾವುದು; ಸದರಿ ದಾಖಲೆ ಅಧಿಕೃತವೇ: | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2026 ರ ನಿಯಮ 69 ರಡಿ ನಿರ್ವಹಿಸಲಾಗುವ ನಮೂನೆ -31 ರ ವಹಿಯ ಆಧಾರದ ಮೇಲೆ ಗ್ರಾಮ ಪಂಚಾಯಿತಿಯ ಕಟ್ಟಡ ಮತ್ತು ಇತರ ಮೂಲಭೂತ ಸೌಕರ್ಯಗಳಾದ ರಸ್ತೆ, ಸೇತುವೆ, ಅಡಿಗಾಲುವೆಗಳು ಮುಂತಾದವುಗಳ ದೃಢೀಕರಣವನ್ನು ನೀಡಬಹುದು. |
| (ಈ) | ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಆವರಣ ಗೋಡೆ, ಕಟ್ಟಡ ಶೆಡ್ ಇತ್ಯಾದಿಗಳನ್ನು ನಿರ್ಮಿಸುವಾಗ ಗ್ರಾಮ ಪಂಚಾಯತ್ ರಸ್ತೆಯಿಂದ ಎಷ್ಟು ಮೀಟರ್ ದೂರದ ಮಾರ್ಜಿನ್ ಕಾಯ್ದುಕೊಳ್ಳಬೇಕು; ಇದಕ್ಕೆ ಅನ್ವಯಿಸುವ ನಿಯಮ ಅಥವಾ ಆದೇಶದ ಪ್ರತಿ ನೀಡುವುದು; | ಖಾಲಿ ಜಾಗ, ವಿಸ್ತೀರ್ಣ ಮತ್ತು ಎತ್ತರದ ಪರಿಮಿತಿಗಳ ಅನುಸಾರ ಸೆಟ್ ಬ್ಯಾಕ್ಗಳ ಪರಿಮಿತಿಗಳನ್ನು ನಿಗಧಿಪಡಿಸಲಾಗುವುದು.<br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್‌ಗಳ ಮತ್ತು ಗ್ರಾಮ ಪಂಚಾಯತ್‌ಗಳ ನಿಯಂತ್ರಣ) ಮಾದರಿ ಉಪವಿಧಿಗಳು) 2015. ರ |

| | | |
|---|---|---|
| | | ಉಪವಿಧಿ 18 ರಿಂದ 23 ರವರೆಗಿನ ಉಪವಿಧಿಗಳಲ್ಲಿ ತಿಳಿಸಲಾಗಿರುತ್ತದೆ. ಉಪವಿಧಿಗಳ ಪ್ರತಿಯನ್ನು ಅನುಬಂಧ-2ರಲ್ಲಿ ನೀಡಿದೆ.<br>The Karnataka Town and country Planning (Development of Land in areas other than Local Planning Areas) Regulations, 2025 Part B ನಿಯಮ 16 ರಲ್ಲಿ ತಿಳಿಸಲಾಗಿರುತ್ತದೆ. ವಿ-ನಿಯಮಗಳ ಪ್ರತಿಯನ್ನು ಅನುಬಂಧ-3 ರಲ್ಲಿ ನೀಡಿದೆ. |
| (ಉ) | ಗ್ರಾಮ ಪಂಚಾಯತಿಗಳ ರಸ್ತೆ ಬದಿಯಲ್ಲಿ ಮೆಸ್ಕಾಂನವರು ವಿದ್ಯುತ್ ಕಂಬ ಅಳವಡಿಸಲು ಮೊದಲು ಗ್ರಾಮ ಪಂಚಾಯತಿಯಿಂದ ಅನುಮತಿ ಪಡೆಯುವ ಅಗತ್ಯವಿದೆಯೇ; ಇದ್ದಲ್ಲಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಮೆಸ್ಕಾಂನವರು ಗ್ರಾಮ ಪಂಚಾಯತ್ ನಿಂದ ಅನುಮತಿ ಪಡೆದ ವಿವರಗಳನ್ನು ನೀಡುವುದು: | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 64 ರಲ್ಲಿ "ಗೊತ್ತುಪಡಿಸಬಹುದಾದಂತಹ ನಿಯಮಗಳಿಗೆ ಒಳಪಟ್ಟು ಯಾವನೇ ವ್ಯಕ್ತಿಯು ಗ್ರಾಮ ಪಂಚಾಯಿತಿಯಿಂದ ಬರಹದ ಅನುಮತಿಯೊಂದಿಗೆ ಯಾವುದೇ ಕಟ್ಟಡವನ್ನು, ಜಾಹಿರಾತು ಫಲಕಗಳನ್ನು ನಿಲ್ಲಿಸಲು, ಮೊಬೈಲ್ ಟವರ್ ಗಳನ್ನು ಸ್ಥಾಪಿಸಲು" ಅನುಮತಿಯನ್ನು ನೀಡುವ ಬಗ್ಗೆ ಉಪಬಂಧವಿರುತ್ತದೆ.<br>ಆದರೆ, ಗ್ರಾಮ ಪಂಚಾಯತಿಗಳ ರಸ್ತೆ ಬದಿಯಲ್ಲಿ ಮೆಸ್ಕಾಂನವರು ವಿದ್ಯುತ್ ಕಂಬ ಅಳವಡಿಸಲು ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆಯುವ ಬಗ್ಗೆ ನಿರ್ದಿಷ್ಟವಾದ ನಿಯಮಗಳು ಇರುವುದಿಲ್ಲ.<br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಮೆಸ್ಕಾಂನವರು ಗ್ರಾಮ ಪಂಚಾಯತ್ ನಿಂದ ಅನುಮತಿ ಪಡೆದ ಪ್ರಕರಣಗಳಿರುವುದಿಲ್ಲ. |
| (ಊ) | 2023-2024ನೇ ಸಾಲಿನ ನಂತರ ಇಲ್ಲಿಯವರೆಗೆ ದಾರಿದೀಪ ಮತ್ತು ಸಿಂಗಲ್ ಲೈನ್ ಹಾಗೂ ವಿದ್ಯುತ್ ಮೀಟರ್ ಅಳವಡಿಸಲು ಗ್ರಾಮ ಪಂಚಾಯತ್ ಖಾತೆಗೆ ನೇರವಾಗಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಅನುದಾನದ ಮೊತ್ತವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು) | 2023-2024ನೇ ಸಾಲಿನ ನಂತರ ಇಲ್ಲಿಯವರೆಗೆ ದಾರಿ ದೀಪ ಮತ್ತು ಸಿಂಗಲ್ ಲೈನ್ ಹಾಗೂ ವಿದ್ಯುತ್ ಮೀಟರ್ ಅಳವಡಿಸಲು ಗ್ರಾಮ ಪಂಚಾಯಿತಿ ಖಾತೆಗೆ ನೇರವಾಗಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.<br>2024-25ನೇ ಸಾಲಿನಲ್ಲಿ ರಾಜ್ಯದ 73 ಗ್ರಾಮ ಪಂಚಾಯಿತಿಗಳಲ್ಲಿ ಬೀದಿ ದೀಪಗಳ ಮೀಟರಿಂಗ್ ಮಾಡಲು ಜಿಲ್ಲಾ ಪಂಚಾಯಿತಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನವನ್ನು ಎಸ್ಕಾಂಗಳಿಗೆ ಪಾವತಿಸುವ ಮೂಲಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-4 ರಲ್ಲಿ ನೀಡಿದೆ. |

ಸಂಖ್ಯೆ: ಗ್ರಾಅಪ 256 ಗ್ರಾಪಂಅ 2026

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

# ಅನುಬಂಧ-1

## 2023-24 ಮತ್ತು 2024-25ನೇ ಸಾಲಿನಲ್ಲಿ 15ನೇ ಹಣಕಾಸು ಯೋಜನೆಯಡಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಯಾದ ಅನುದಾನದ ವಿವರ

| ಕ್ರ. ಸಂ | ಜಿಲ್ಲೆ | 2023-24 | 2024-25 | ಒಟ್ಟು |
|---|---|---|---|---|
| 1 | ಬಾಗಲಕೋಟೆ | 753790205 | 753988131 | 1507778336 |
| 2 | ಬಳ್ಳಾರಿ | 420049937 | 420854669 | 840904606 |
| 3 | ಬೆಳಗಾವಿ | 1875294766 | 1876525850 | 3751820616 |
| 4 | ಬೆಂಗಳೂರು(ನಗರ) | 401182847 | 404699470 | 805882317 |
| 5 | ಬೆಂಗಳೂರು (ಗ್ರಾ) | 368364530 | 375168079 | 743532609 |
| 6 | ಬೀದರ್ | 692690462 | 723109826 | 1415800288 |
| 7 | ಚಾಮರಾಜನಗರ | 497148908 | 487651236 | 984800144 |
| 8 | ಚಿಕ್ಕಬಳ್ಳಾಪುರ | 528208205 | 570654355 | 1098862560 |
| 9 | ಚಿಕ್ಕಮಗಳೂರು | 516794559 | 521707207 | 1038501766 |
| 10 | ಚಿತ್ರದುರ್ಗ | 768452333 | 813491652 | 1581943985 |
| 11 | ದಕ್ಷಿಣ ಕನ್ನಡ | 741518138 | 731441122 | 1472959260 |
| 12 | ದಾವಣಗೆರೆ | 579163503 | 708647536 | 1287811039 |
| 13 | ಧಾರವಾಡ | 542010510 | 452919644 | 994930154 |
| 14 | ಗದಗ | 384176439 | 385040564 | 769217003 |
| 15 | ಹಾಸನ | 802509234 | 857414610 | 1659923844 |
| 16 | ಹಾವೇರಿ | 704282438 | 686015027 | 1390297465 |
| 17 | ಕಲಬುರಗಿ | 974151921 | 976387904 | 1950539825 |
| 18 | ಕೊಡಗು | 274135949 | 279130574 | 553266523 |
| 19 | ಕೋಲಾರ | 563505861 | 574909895 | 1138415756 |
| 20 | ಕೊಪ್ಪಳ | 591433652 | 606357595 | 1197791247 |
| 21 | ಮಂಡ್ಯ | 908144382 | 908794861 | 1816939243 |
| 22 | ಮೈಸೂರು | 902901527 | 943925756 | 1846827283 |
| 23 | ರಾಯಚೂರು | 753348638 | 769977577 | 1523326215 |
| 24 | ಬೆಂಗಳೂರು ದಕ್ಷಿಣ | 415081111 | 424498326 | 839579437 |
| 25 | ಶಿವಮೊಗ್ಗ | 612179171 | 625383435 | 1237562606 |
| 26 | ತುಮಕೂರು | 1142231126 | 1160897176 | 2303128302 |
| 27 | ಉಡುಪಿ | 488670035 | 500013995 | 988684030 |
| 28 | ಉತ್ತರಕನ್ನಡ | 661031485 | 645211354 | 1306242839 |
| 29 | ವಿಜಯನಗರ | 518208484 | 542996668 | 1061205152 |
| 30 | ವಿಜಯಪುರ | 990770615 | 1077613438 | 2068384053 |
| 31 | ಯಾದಗಿರಿ | 486948873 | 527039468 | 1013988341 |
| **ಒಟ್ಟು** | | **20858379844** | **21332467000** | **42190846844** |